


### ಮಕ್ಕಳ ಅಳು: ತಾಯಿಗೆ ತಿಳುವಳಿಕೆ

'ಮಕ್ಕಳೇಕೆ ಅಳುತ್ತವೆ?' ಅ. 21ರ ಮುಖಪುಟ ಲೇಖನ ಹಸುಗೂಸಿನ ತಾಯಂದಿರಿಗೆ ತಿಳುವಳಿಕೆ ಮೂಡಿಸುತ್ತದೆ. ಎಳೆಯ ಕಂದನ ಭಾಷೆ 'ಅಳು'ವಿನ ಬಗ್ಗೆ ಹಿರಿಯ ಲೇಖಕಿ ಡಾ. ಎಚ್. ಗಿರಿಜಮ್ಮ ಸರಳವಾಗಿ ತಿಳಿಸಿದ್ದಾರೆ.

-ಸು. ವಿಜಯಲಕ್ಷ್ಮಿ, ಶಿವಮೊಗ್ಗ/ ಎಸ್.ವಸಂತಾ, ಸ್ನೇಹಾ ಶ್ರೀನಾಥ್, ಕತ್ತರಗುಪ್ಪ/ ಎಂ.ಆರ್. ಶೋಭಾಶೇಖರ, ದೊಡ್ಡಬಳ್ಳಾಪುರ/ ಪಿ.ಎನ್.ಶ್ರೀವತ್ಸ, ಬೆಂಗಳೂರು

### ಬಡವರೇ ಅಸ್ಪೃಶ್ಯರು

ದಲಿತರು ಬಲ್ಲಿದರಾಗಿ ಇತರ ಜನಾಂಗದ ಗೌರವಕ್ಕೆ ಪಾತ್ರರಾಗುತ್ತಿರುವುದರ ಬಗ್ಗೆ ಶಿಕಾಕು ಚೆನ್ನಾಗಿ ವಿಶ್ಲೇಷಿಸಿದ್ದಾರೆ. ಮೀಸಲಾತಿ ಪ್ರಯೋಜನ ಈಗಾಗಲೇ ಪಡೆದು ಸ್ಥಿತಿವಂತರಾದ ಕೆನೆಪದರದವರು ಅದು ತಮಗೇ ಶಾಶ್ವತವಾಗಿರಲಿ ಎಂದು ತಮ್ಮ ಜಾತಿಯ ಬಡವರನ್ನೇ ಮತ್ತಷ್ಟು ಅಸ್ಪೃಶ್ಯರಾಗಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಮೀಸಲಾತಿ ಅವರಲ್ಲೇ ಇರುವ ಬಡವರಿಗೆ ತಲುಪಲಿ.

-ಸೌದಾಮಿನೀ ಪ್ರಭಾಕರ, ಹಾಸನ/ ಮಹಾವೀರ ಕಾಸಾರ, ಚನ್ನಗಿರಿ

### ಬಾದಾಮಿ: ಹೊಸ ಹೊಳಹು

ದಿಲಾವರ್ ರಾಮದುರ್ಗರ 'ಇಲ್ಲಿ ಆರಾಧನೆ ಕಲಾವಿದನಿಗೆ; ದೇವರಿಗಲ್ಲ!' ಬಾದಾಮಿ ಕುರಿತ ಲೇಖನ ಓದಿದೆ.

ಗುಹಾಂತರ ದೇವಾಲಯದ ಕೆಲವು ಶಿಲ್ಪಗಳು ವಿರೂಪಗೊಂಡಿರುವುದು ಮತ್ತು ಅದರ ಹಿಂದೆ ಅನ್ಯ ಧರ್ಮೀಯ ದೇವರು ಧರ್ಮವನ್ನು ಸಹಿಸದವರ ನಡೆ ಇರುವುದು ಅಷ್ಟಾಗಿ ನಾವು ಗಮನಿಸಿದ್ದಿಲ್ಲ. ಇಲ್ಲಿಯವರೆಗೂ ತಿಳಿದುಕೊಂಡಿರುವುದು ಪೂರ್ಣ ಸತ್ಯವಲ್ಲವೇನೋ ಅನ್ನಿಸಿತು.

-ಕೊಹಿಮ, ಬಸರಕೋಡು/ ಮೊಳಕಾಲ್ಮೂರು ಸುರೇಶ, ಬಳ್ಳಾರಿ/ ಬಿ.ಎಸ್.ಮಳ್ಳೂರ, ಹಲಗತ್ತಿ

### ಬಾದಾಮಿ ಎಲ್ಲಕ್ಕೂ ಮೀರಿದ್ದು

ಶಿಲ್ಪಕಲಾ ಸೌಂದರ್ಯದ ಪ್ರಸ್ತಾಪ ಮಾಡುವಾಗ ನಮ್ಮ ಇತಿಹಾಸಕಾರರು ಬೇಲೂರು, ಹಳೇಬೀಡು, ಸೋಮನಾಥಪುರಗಳನ್ನು ಮುಂದಿಡುತ್ತಾರೆ. ಆದರೆ ಇದಕ್ಕೂ ಮೀರಿದ ಶಿಲ್ಪ ಸೌಂದರ್ಯ ಬಾದಾಮಿಯಲ್ಲಿದೆ ಎಂದು ಲೇಖನ ಓದಿದಾಗ ಮತ್ತೆ ನೆನಪಾಯಿತು.

-ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

### ಗಂಭೀರವಾದ ಕಥೆ

ವಿಶ್ವನಾಥ ಅಡಿಗರ 'ಕತ್ತಲೆಯ ಮೊತ್ತ' ಕಥೆ ಗಂಭೀರವಾಗಿ ಓದಿಸಿಕೊಂಡಿತು. ಬಳಸಿರುವ ಭಾಷೆ ಸಮೃದ್ಧ. ಇತ್ತೀಚಿನ ಕಥಾ ಲೇಖಕರಲ್ಲಿ ಇಂತಹ ಭಾಷಾ ಬಳಕೆ ಅಪರೂಪ.

ಕೆನೆ ಪದರ ಮೀಸಲಾತಿಯ ದುಷ್ಪರಿಣಾಮದ ಬಗ್ಗೆ ಅರ್ಥಪೂರ್ಣವಾಗಿ ಕಥೆ ಹೆಣೆದಿದ್ದಾರೆ.

-ರಾಜಶೇಖರ ಗೌಡ, ನಾಗರಾಜ ಬಣಕಾರ್, ಕೊಟ್ಟೂರು/ ಎಚ್.ಎಂ. ಕಾಳಮ್ಮ, ಬಸರಕೋಡು

### ರೊಬೋಟ್ ಭವಿಷ್ಯದ ಮಾನವ

ಜಯಕರ ಭಂಡಾರಿಯವರ ರೊಬೋಟ್ ಕುರಿತಾದ ಲೇಖನ ಭವಿಷ್ಯದ ಯಂತ್ರ ಮಾನವರ ಬಗ್ಗೆ ಬೆಳಕು ಚೆಲ್ಲಿತ್ತು.

-ಸರ್ದಾರ್ ಎಂ. ಅರಸೀಕೆರೆ

### ಇತಿಹಾಸಕ್ಕೆ ಸಾಕ್ಷಿ ದೇಶಮುಖರ ವಾಡೆ

ಗತಕಾಲದ ಇತಿಹಾಸಕ್ಕೆ ಸಾಕ್ಷಿಯಾಗಿ ನಿಂತಿದೆ ಕೊಟ್ನಾಳದ ದೇಶಮುಖರ ವಾಡೆಯ ಒಂದೊಂದು ಕಲ್ಲು. ಈ ಕುರಿತ ಶಂಕರ ಬೈಚಬಾಳ ಲೇಖನ ಅಪ್ಯಾಯಮಾನ!

-ಅಮೃತೇಶ್ವರ ತಂಡರ, ಅಣ್ಣಿಗೇರಿ

## ನೀರ ಮೇಲಣ ಗುಳ್ಳೆ



### ವಿಶಿಷ್ಟ ಧಾರಾವಾಹಿ

ನಿರ್ಮಲಾ ವಿ. ಬೀಳಗಿಯವರ ಧಾರಾವಾಹಿ 'ನೀರ ಮೇಲಣ ಗುಳ್ಳೆ' ಎಲ್ಲೂ ಬೇಸರ ಮೂಡಿಸದೆ, ಕುತೂಹಲದಿಂದ ಓದಿಸಿಕೊಂಡು ಹೋಗುವಲ್ಲಿ ಯಶಸ್ವಿಯಾಗಿದೆ. ಪಾತ್ರ ಸೃಷ್ಟಿ ಯಂತೂ ಅಚ್ಚುಕಟ್ಟಾಗಿದ್ದು, ಇದೊಂದು ವಿಶಿಷ್ಟ ಧಾರಾವಾಹಿಗಳ ಪಂಕ್ತಿಗೆ ಸೇರುವುದರಲ್ಲಿ ಸಂಶಯವಿಲ್ಲ.

-ಸ್ನೇಹಾ ಶ್ರೀನಾಥ್, ಬೆಂಗಳೂರು

### ಲಂಡನ್ ಮತ್ತು ಮಾಯಿ

ಲಂಡನ್ ವರ್ಣನೆ ಮತ್ತು ಮಾಯಿ ಇಷ್ಟೇ ಆದರೂ ಧಾರಾವಾಹಿ ಬೇಸರವಾಗದೆ ಓದಿಸಿಕೊಂಡು ಹೋಯಿತು.

-ಡಿ.ಎಸ್. ಪಂಕಜಸುಬ್ರಮಣ್ಯಂ, ಬೆಂಗಳೂರು

### ಕಣ್ಣಿಗೆ ಕಟ್ಟಿದ ದಾಂಪತ್ಯ

'ನೀರ ಮೇಲಣ ಗುಳ್ಳೆ' ಧಾರಾವಾಹಿಯು ಹೊಸ ರೀತಿಯಲ್ಲಿದ್ದು ವಾರ ವಾರಕ್ಕೂ ಕುತೂಹಲವನ್ನು ಕೆರಳಿಸುವಲ್ಲಿ ಯಶಸ್ವಿಯಾಯಿತು. ಮಾಯಿ ತನ್ನ ತವರು, ಬಳಗದವರನ್ನೆಲ್ಲಾ ಬಿಟ್ಟು ಪರಿಚಯವೇ ಇಲ್ಲದ ಗಂಡ ಪೂರ್ಣನೊಂದಿಗೆ ಸಂಸಾರ ಮಾಡಲು ಹೊರದೇಶಕ್ಕೆ ಹೋಗುವುದು, ಅವರ ದಾಂಪತ್ಯ ಜೀವನ, ಪ್ರವಾಸ ಇವೆಲ್ಲವನ್ನೂ ಕಣ್ಣಿಗೆ ಕಾಣುವಂತೆ ವಿವರಿಸಿದ್ದಾರೆ.

-ಮೊಳಕಾಲ್ಮೂರು ಸುರೇಶ, ಬಳ್ಳಾರಿ

### ಸವಿ ದಾಂಪತ್ಯ ದುರಂತವಾಗದಿರಲಿ

ಅಸಂಬದ್ಧ, ಅಶ್ಲೀಲ, ಅಸಹ್ಯ ಪದಗಳೇ ಇಲ್ಲದಂತೆ ಧಾರಾವಾಹಿ ಚೆನ್ನಾಗಿ ಮೂಡಿ ಬರುತ್ತಿದೆ. ಪೂರ್ಣ-ಮಾಯಿಯ ದಾಂಪತ್ಯ ಹೊಟ್ಟೆ ಉರಿಸುವಷ್ಟು ಆದರ್ಶಮಯವಾಗಿದೆ. ಇವರ ದಾಂಪತ್ಯ ದುರಂತವಾಗದಿರಲಿ.

-ಪಂಕಜಾ ಮೋಹನ್, ಕ್ಯಾತನಹಳ್ಳಿ

### ಹೊಂದಾಣಿಕೆಯ ಸಂತಸ

ಧಾರಾವಾಹಿ ಚೆನ್ನಾಗಿತ್ತು. ಪೂರ್ಣನಿಗೆ ಬಿಜಾಪುರದ ಮಾಯಿ ಹೊಂದಿಕೊಂಡಿರುವುದು ಸಂತೋಷ ತಂದಿತು.

-ಕೆ.ಎಸ್. ರಾಜೇಶ್ವರಿ, ತುಮಕೂರು



## ನಗೆ ಹೊನಲು




ಶಾಮಿಯಾನ, ಕುರ್ಚಿಗಳ ಸಂಗಡ ಶಾಸಕರನ್ನೂ ಪೂರೈಸುವ ಬಿಸಿನೆಸ್ ಮಾಡಿದ್ರೆ ಹೇಗೆ ಅಂತ..!




ಇದನ್ನು ಸಕ್ರಮ ಮಾಡೋದಕ್ಕೆ ಆಗೊಲ್ವ ಸಾರ್..!



ಜೀವನವೇ ಬೇಸರವಾಗಿದೆ ಕಣಯ್ಯಾ. ಅದಕ್ಕೆ ಆತ್ಮಹತ್ಯೆ ಮಾಡಿಕೊಳ್ತಾ ಇದ್ದೀನಿ. ಆದರೆ ಯಾವ ದಿಕ್ಕಿಗೆ ಮುಖ ಮಾಡಿ ಆತ್ಮಹತ್ಯೆ ಮಾಡಿಕೊಳ್ಳಬೇಕು ಅನ್ನೋ ಯೋಚನೆ ಮಾಡ್ತಾ ಇದ್ದೀನಿ..